ಕಥೆ

# ಅಂತರಾಳ

■ ಸಿ.ಎನ್. ಮುಕ್ತಾ

ಫೋನು ನಾಲ್ಕೈದು ಸಲ ರಿಂಗಾದಾಗ ಅಡುಗೆ ಮನೆಯಲ್ಲಿದ್ದ ಪುಷ್ಪ ಹೊರಗೆ ಬಂದರು. ಅವರ ಮಗಳು ಬಕುಳಾ ಉಯ್ಯಾಲೆಯ ಮೇಲೆ ಕುಳಿತು ಟಿ.ವಿ. ನೋಡುತ್ತಿದ್ದಳು.

'ಫೋನ್ ರಿಂಗಾಗ್ತಿದೆ. ನೋಡಬಾರದೇನೆ?'

'ಲ್ಯಾಂಡ್‌ಲೈನ್‌ಗೆ ಫೋನ್ ಮಾಡುವವರು ನಮ್ಮತ್ತೆಯೊಬ್ಬರೇ. ನಿನ್ನ ಅಕ್ಕತಂಗಿಯರು ಈ ಟೈಂನಲ್ಲಿ ಮಾಡಲ್ಲ. ಈ ಸಿನಿಮಾ ಮುಗಿದ ಮೇಲೆ ನಾನೇ ನಮ್ಮತ್ತೇಗೆ ಫೋನ್ ಮಾಡ್ತೀನಿ ಬಿಡು.'

'ಎಂತಹ ಹುಡುಗೀನೇ ನೀನು? ಅತ್ತೆ–ಮಾವ ಅಂದ್ರೆ ಗೌರವಾನೂ ಇಲ್ಲ. ಭಯ–ಭಕ್ತೀನೂ ಇಲ್ಲ.'

'ಅದೆಲ್ಲಾ ನಿಮ್ಮ ಕಾಲಕ್ಕೇ ಸರಿ. ನನಗೆ ನಮ್ಮತ್ತೆ ಮಾತಾಡಿದರೆ ಇರಿಟೇಟ್ ಆಗತ್ತೆ.'

'ನಿನಗೆ ಯಾವುದಕ್ಕೆ ಇರಿಟೇಟ್ ಆಗಲ್ಲ ಹೇಳು. ಮುಖ್ಯವಾಗಿ ನಿನಗೆ ಹೊಂದಿಕೊಂಡು ಹೋಗುವ ಗುಣವಿಲ್ಲ. ಯಾವಾಗಲೂ ಬೇರೆಯವರಲ್ಲಿ ತಪ್ಪು ಹುಡುಕ್ತೀಯ?'

ಅಷ್ಟರಲ್ಲಿ ಸಿನಿಮಾ ಮುಗಿಯಿತು. ಬಕುಳಾ ಟಿ.ವಿ. ಆರಿಸಿ ಉಯ್ಯಾಲೆಯಿಂದ ಇಳಿದಳು. ಪುನಃ ಫೋನ್ ರಿಂಗಾಯಿತು. ಬಕುಳಾ ಕಾಲ್ ರಿಸೀವ್ ಮಾಡಿ, 'ಹಲೋ' ಎಂದಳು.

'ಹಲೋ, ಹೇಗಿದ್ದೀಯಮ್ಮ ಬಕುಳಾ?'

'ನಾನು ಚೆನ್ನಾಗಿದ್ದೀನಿ ಅತ್ತೆ. ನೀವು ಹೇಗಿದ್ದೀರಾ? ಮಾವ ಹೇಗಿದ್ದಾರೆ?'

'ನಾವೆಲ್ಲಾ ಚೆನ್ನಾಗಿದ್ದೇವೆ. ಈ ಭಾನುವಾರಕ್ಕೆ ಆಷಾಢ ಮುಗಿಯತ್ತೆ. ನೀನು ಯಾವಾಗ ಇಲ್ಲಿಗೆ ಬರ್ತೀಯಾ?'

'ನಿಮ್ಮ ಮಗ ಬಂದು ಕರೆದುಕೊಂಡು ಹೋಗ್ತಾರಂತೆ.'

'ಅವನಿಗೆ ಬರಕ್ಕಾಗಲ್ಲ. ನೀನೇ ನಿಮ್ಮ ತಂದೆ–ತಾಯಿ ಜೊತೆ ಗುರುವಾರ ಬಾ.'

'ಅಪ್ಪ ಅಮ್ಮನ ಜೊತೆ ಬರಬೇಕಾ?'

'ಹೌದಮ್ಮ, ನಾನು ಅವರ ಹತ್ತಿರ ಮಾತಾಡಬೇಕು.'

'ಆಗಲಿ ಅತ್ತೆ. ಅಮ್ಮ–ಅಪ್ಪ ಹೊರಗಡೆ ಹೋಗಿದ್ದಾರೆ. ಅವರು ಬಂದ ತಕ್ಷಣ ಹೇಳ್ತೀನಿ' ಎಂದಳು ಬಕುಳಾ.

ಅಷ್ಟರಲ್ಲಿ ರಘೋತ್ತಮ್ ಎದ್ದು ಬಂದು 'ಪುಷ್ಪ ಕಾಫಿ' ಎಂದರು. ಪುಷ್ಪ ಕಾಫಿ, ಪಕೋಡಾ ಇರುವ ತಟ್ಟೆ ಹಿಡಿದು ಬಂದರು.

'ನಿಮ್ಮತ್ತೆ ಯಾಕೆ ಫೋನ್ ಮಾಡಿದ್ರು?'

ಬಕುಳಾ ವಿಷಯ ತಿಳಿಸಿದಳು.

'ನಮ್ಮನ್ನು ಯಾಕೆ ಬರಹೇಳಿದ್ದಾರೆ? ಬಕುಳಾ ನೀನೇನಾದ್ರೂ ತೊಡಕು ಮಾಡಿಕೊಂಡು ಬಂದಿದ್ದೀಯೇನೇ?'

'ಏನಮ್ಮಾ ಹಾಗಂದ್ರೆ?'

'ನಿಮ್ಮತ್ತೆ ಜೊತೆ ಯಾವುದಾದರೂ ವಿಷಯಕ್ಕೆ ಜಗಳವಾಡಿದ್ದೀಯಾ?'

'ಸುಮ್ನಿರಮ್ಮ. ನನ್ನ ಮದುವೆಯಾಗಿ ಮೂರು ತಿಂಗಳೂ ಆಗಿಲ್ಲ. ಮದುವೆಯ ತಕ್ಷಣ ಒಂದು ವಾರ ಇಲ್ಲೇ ಇದ್ವಿ. ಆಮೇಲೆ ಹನಿಮೂನ್‌ಗೆ ಸಿಂಗಪೂರ್‌ಗೆ ಹೋದ್ವಿ. ಅಲ್ಲಿಂದ ಬಂದಮೇಲೆ ಅವರಿವರ ಮನೆಗೆ ಊಟಕ್ಕೆ ಹೋಗೋದೇ ಆಯ್ತು. ಭಾನುವಾರಗಳಲ್ಲಿ ಬೆಳಗ್ಗೆ ಹೋದರೆ ರಾತ್ರಿ ವಾಪಸ್ಸಾಗ್ತಿದ್ದೆವು. ಆಷಾಢಮಾಸಕ್ಕೆ ಇಲ್ಲಿಗೆ ಬಂದಿದ್ದಾಯ್ತು. ನನಗೆ ಜಗಳವಾಡಲು ಟೈಂ ಎಲ್ಲಿತ್ತಮ್ಮ?'

'ಏನೋಮ್ಮ. ನನಗ್ಯಾಕೋ ಭಯವಾಗ್ತಿದೆ.'

'ಭಯ ಯಾಕಮ್ಮ? ಅವರೇನಾದರೂ ನಿಮ್ಮ ಹತ್ತಿರ, ನಿಮ್ಮ ಮಗಳಿಗೆ ಬುದ್ಧಿ ಹೇಳಿ. ನಿಮ್ಮ ಮಗಳು ಹಾಗಿರಬೇಕು, ಹೀಗಿರಬೇಕೂಂತ ಹೇಳಿದರೆ ನಾವು ಬೇರೆ ಮನೆಗೆ ಹೋಗ್ತೀವಷ್ಟೆ.'

'ಮುಚ್ಚೇಬಾಯಿ. ಬೇರೆ ಮನೆಗೆ ಹೋಗ್ತಾಳಂತೆ. ಈ ರೀತಿ ಮನೆ ಒಡೆಯುವ ಬುದ್ಧಿ ನಿನಗೆ ಎಲ್ಲಿಂದ ಬಂತೇ?'

'ಅಮ್ಮ ನನಗೆ ಅಲ್ಲಿ ಅಡ್ಜಸ್ಟ್ ಆಗಕ್ಕಾಗಲ್ಲ ಅನ್ನಿಸತ್ತೆ. ನಮ್ಮತ್ತೆ ಮಾವಂಗೆ ಬುದ್ಧಿಯಿಲ್ಲ. ದಿನಾರಾತ್ರಿ ಊಟವಾದ ಮೇಲೆ ಎಲೆ–ಅಡಿಕೆ ಹಾಕಿಕೊಳ್ಳುತ್ತಾ ನಾಳೆ ಏನು ತಿಂಡಿ ಮಾಡಬೇಕು, ಏನು ಅಡಿಗೆ ಮಾಡಬೇಕೂಂತ ಚರ್ಚೆ ಮಾಡ್ತಾರೆ. ಬೆಳಗ್ಗೆ ಆರೂವರೆಗೆ ಕೆಲಸದವಳು ಬರ್ತಾಳೆ. ಅವಳಿಗೆ ಕಾಫಿ ಕೊಟ್ಟು, ಅವಳ ಜೊತೆ ಜೋರಾಗಿ ಹರಟೆ ಹೊಡೆಯುತ್ತಾರೆ. ನನಗೆಷ್ಟು ಇರಿಟೇಟ್ ಆಗತ್ತೆ ಗೊತ್ತಾ?'

'ಅವರಿಗೂ ನಿನ್ನನ್ನು ನೋಡಿ ನಿನ್ನ ನಡವಳಿಕೆ ನೋಡಿ ಇರಿಟೇಟ್ ಆಗಿರಬಹುದು. ಮನೆ ಸೊಸೆ ನಮ್ಮನೆಗೆ ತಕ್ಕಹಾಗೆ ಇರಬೇಕೂಂತ ಅವರು ಬಯಸುವುದರಲ್ಲಿ ತಪ್ಪೇನಿದೆ?'

'ಅಮ್ಮ, ಅವರುಗಳು ತುಂಬಾ ವಿಚಿತ್ರವಾಗಿ ಆಡ್ತಾರೆ. ಅದಕ್ಕೆ ನನಗೆ ಸಿಟ್ಟು ಬರೋದು. ದಿನಾ ಬೆಳಗ್ಗೆ ಹನ್ನೊಂದು ಗಂಟೆಗೆ ನಮ್ಮಾವ ನಮ್ಮತ್ತೇಗೆ ಜೋರಾಗಿ ನ್ಯೂಸ್‌ಪೇಪರ್ ಓದಿ ವಿಷಯ ಹೇಳ್ತಾರೆ. ಟಿ.ವಿ. ಹಾಕಿಕೊಂಡರೆ ಗೊತ್ತಾಗಲ್ವಾ? ನಮ್ಮಾವ ಯಾಕೆ ಹತ್ತೂ ಮನೆಗೆ ಕೇಳುವ ಹಾಗೆ ಓದಿ ಹೇಳಬೇಕು?'

'ಅದು ಅವರ ಅಭ್ಯಾಸ. ಅದರಿಂದ ನಿನಗೇನು ತೊಂದರೆ? ನಿಮ್ಮತ್ತೆಗೆ ಟಿ.ವಿ. ನೋಡುವ ಅಭ್ಯಾಸ ಇಲ್ಲದಿರಬಹುದು'.

'ಹಾಗೇನಿಲ್ಲ. ಬೆಳಗ್ಗೆ ಟಿ.ವಿ. ನೋಡಲ್ಲ. ಮಧ್ಯಾಹ್ನ ಊಟವಾದ ಮೇಲೆ ಕೊಂಚ ಹೊತ್ತು ಟಿ.ವಿ. ನೋಡಿ ಐದು ಗಂಟೆಯವರೆಗೂ ಮಲಗ್ತಾರೆ. ನಮ್ಮಾವ ಐದು ಗಂಟೆಗೆ ಟೀ ಮಾಡಿ ನಮ್ಮತ್ತೇನ್ನ ಎಬ್ಬಿಸ್ತಾರೆ. ಅವರು ಟೀ ಕುಡಿದು ಮುಖ ತೊಳೆದು ರೆಡಿಯಾಗಿ ರಾತ್ರಿಗೆ ಚಪಾತಿ ಹಿಟ್ಟು ಕಲಿಸಿಟ್ಟು ಪಲ್ಯಾನೋ, ಗೊಜ್ಜೋ ಮಾಡಿ, ಟಿ.ವಿ. ಮುಂದೆ ಕುಳಿತರೆ ಎಂಟೂವರೆಯವರೆಗೂ ಏಳಲ್ಲ. 8.30ರಿಂದ 9.30 ಊಟದ ಸಮಯ. ಆಮೇಲೆ ಎರಡು ಧಾರಾವಾಹಿಗಳನ್ನು ನೋಡಿ ಮಲಗ್ತಾರೆ.'

'ನಿಮ್ಮತ್ತೆ ಹೊರಗೇ ಹೋಗಲ್ವಾ?'

'ಹೋಗದೆ ಏನು? ಪ್ರತಿ ಸೋಮವಾರ ಸಾಯಂಕಾಲ ಈಶ್ವರನ ದೇವಸ್ಥಾನಕ್ಕೆ, ಗುರುವಾರ ರಾಯರಮಠಕ್ಕೆ, ಶನಿವಾರ ಆಂಜನೇಯನ ಗುಡಿಗೆ ನಮ್ಮಾವನ ಜೊತೆ ಹೋಗಿ ಬರ್ತಾರೆ. ಯಾರೇ ಮದುವೆ, ಮುಂಜಿ, ನಾಮಕರಣ, ಗೃಹಪ್ರವೇಶಕ್ಕೆ ಕರೆಯಲಿ, ತಪ್ಪದೇ ಹೋಗ್ತಾರೆ'.

